**ಶ್ರೀ ಜಗದೀಶ್ ಶೆಟ್ಟರ್ :** ಮಾನ್ಯ ಸದಸ್ಯರು ಮೊದಲು ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

**ಶ್ರೀ ಆರಗ ಜ್ಞಾನೇಂದ್ರ :** ಬಡರರು ಮತ್ತು ಸಾಮಾನ್ಯ ಜನರ ಮನೆಗಳ ಹತ್ತಿರ ಹೋಗಿ ಒತ್ತಾಯದಿಂದ ಮತಾಂತರಗೊಳಿಸುತ್ತಿದ್ದಾರೆ.

**ಅಧ್ಯಕ್ಷರು :** ಮಾನ್ಯ ಮಂತ್ರಿಗಳ ಜೊತೆಯಲ್ಲಿ ನಾನು ಮಾತನಾಡಿ ಸೋಮರಾರ ಅಥವಾ ಮಂಗಳವಾರ ಇದನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :** ಇದು ಬಹಳ ಗಂಭೀರವಾದಂಥ ವಿಷಯ. ನಮಗೆ ಗೊತ್ತಿಲ್ಲದಂತೆ ಸಮಾಜದಲ್ಲಿ ಅಶಾಂತಿ ಮೂಡಿಸುತ್ತಿದ್ದಾರೆ.

**ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಉಡುಪಿ ಜಿಲ್ಲೆಯಲ್ಲಿನ ಪರಿಶಿಷ್ಟ ಪಂಗಡಗಳ ಗುಂಪಿಗೆ ಸೇರಿದ ಕೊರವ ಜನಾಂಗದ ಆರ್ಥಿಕ ಸ್ಥಿತಿ ಕುರಿತು.**

**ಶ್ರೀ ಎನ್. ಯೋಗೀಶ್‌ಭಟ್ (ಮಂಗಳೂರು) :** ಸನ್ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಯಲ್ಲಿರತಕ್ಕಂಥ ಪರಿಶಿಷ್ಟ ಪಂಗಡಗಳ ಗುಂಪಿಗೆ ಸೇರುವ ಕೊರವ ಜನಾಂಗದವರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದಾರೆ. ಇವರು ಧರಣಿ ಸತ್ಯಾಗ್ರಹವನ್ನು ಆರಂಭ ಮಾಡಿದ್ದಾರೆ. ಮಾನ್ಯ ಸಚಿವರಾದಂಥ ಶ್ರೀ ಕಾಗೋಡು ತಿಮ್ಮಪ್ಪನವರು ಮಂಗಳೂರಿಗೆ ಬಂದಂಥ ಸಂದರ್ಭದಲ್ಲಿ ಇವರು ಮಾನ್ಯ ಸಚಿವರನ್ನು ಭೇಟಿ ಮಾಡಿ ಮನವಿಯನ್ನು ಕೂಡ ಸಲ್ಲಿಸಿದ್ದಾರೆ. ಕಳೆದ ಒಂದು ವರ್ಷದಿಂದ ಅಧಿಕಾರಿಗಳ ಮಟ್ಟದಲ್ಲಿ ಮತ್ತು ಸಚಿವರ ಮಟ್ಟದಲ್ಲಿ ಒಂದು ವಿಶೇಷವಾದಂಥ ಪ್ರಯತ್ನ ಆಗುತ್ತಿದೆ. ಈ ಅಜಲು ಪದ್ಧತಿಯನ್ನು ನಿಷೇಧಿಸುವುದಕ್ಕೆ ತಕ್ಷಣ ಕಾನೂನನ್ನು ತರಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಹಾಗೆಯೇ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಅಭಿವೃದ್ಧಿ ನಿಗಮದ ಕಡೆಯಿಂದ 38 ಜನರಿಗೆ ಆಟೋರಿಕ್ಷಾಗಳನ್ನು ಕೊಟ್ಟಿದ್ದಾರೆ. ಆದರೆ ಇವತ್ತು ಪರರಾನಿಗಿ ಇಲ್ಲದೇ ಇದ್ದರೆ ಅವರು ಆಟೋರಿಕ್ಷಾಗಳನ್ನು ಹೇಗೆ ಓಡಿಸುತ್ತಾರೆ? ಇವತ್ತಿನ ದಿವಸ ಸ್ಕೀಂಗಳನ್ನು ಮಾಡಿದ್ದರೂ ಸಹ ಪ್ರಯೋಜನ ಆಗುವಂತೆ ಕಾಣುತ್ತಿಲ್ಲ. ಆದ್ದರಿಂದ ಇದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣ ನೀಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ :** ಅಜಲು ಪದ್ಧತಿಯನ್ನು ನಿಷೇಧ ಮಾಡುವ ದೃಷ್ಟಿಯಿಂದ ಒಂದು ಕರಡು ಮಸೂದೆಯನ್ನು ತಯಾರು ಮಾಡಿ ಕಾನೂನು ಇಲಾಖೆಯ ಸ್ಪಷ್ಟೀಕರಣಕ್ಕೋಸ್ಕರ ಕಳುಹಿಸಿಕೊಟ್ಟಿದ್ದೇವೆ. ಈಗ ಪುನಃ ಇದು ನಮ್ಮ ಇಲಾಖೆಗೆ ಬಂದಿದ್ದು, ಕೆಲವು ಹೆಚ್ಚುವರಿ ಮಾಹಿತಿಗಳನ್ನು ಕೇಳಿದ್ದಾರೆ. ಆದ್ದರಿಂದ ಈಗ ಅದನ್ನು ಪುನಃ ಅಲ್ಲಿಗೆ ಕಳುಹಿಸಿಕೊಡಲಾಗಿದ್ದು, ಕಾನೂನು ಇಲಾಖೆಯಿಂದ ಫೈನಲ್ ಡ್ರಾಫ್ಟ್ ಆದಮೇಲೆ ಆದಷ್ಟು ಬೇಗ ಜಾರಿಗೆ ತರತಕ್ಕಂಥ ಕೆಲಸವನ್ನು ನಾವು ಮಾಡುತ್ತೇವೆ. ಇನ್ನು ಕೊರಗ ಜನಾಂಗದವರಿಗೆ ಆಟೋರಿಕ್ಷಾಗಳನ್ನು ಕೊಟ್ಟು ಪರವಾನಿಗೆ ಕೊಡದೇ ಇರತಕ್ಕಂಥ ವಿಚಾರವನ್ನು ನಾನು ಮಂಗಳೂರಿಗೆ ಹೋಗಿದ್ದಾಗ ನನ್ನ ಗಮನಕ್ಕೆ ತಂದರು. ಅಲ್ಲಿರತಕ್ಕಂಥ ಎಸ್. ಪಿ. ಯವರಿಗೆ ಹೇಳಿ ಬಂದಿದ್ದೇನೆ ಮತ್ತು

ನಿನ್ನೆಯ ದಿವಸ ಸಂಪರ್ಕವನ್ನು ಕೂಡ ಮಾಡಿದ್ದು ಆ ಜನರಿಗೆ ಪರರಾನಗಿಯನ್ನು ಆದಷ್ಟು ಬೇಗ ಕೊಡುತಕ್ಕಂಥ ಕೆಲಸವನ್ನು ಮಾಡಿಸುತ್ತೇನೆ.

ಶ್ರೀ ಎಸ್. ಕೆ. ಬೆಳ್ಳುಬ್ಬಿ : ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೋಸ್ಕರ ನಾನೊಂದು ಪ್ರಶ್ನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಆದ್ದರಿಂದ ನನಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಅದು ಭಾರಿ ನೀರಾವರಿ ಇಲಾಖೆಗೆ ಸಂಬಂಧಪಟ್ಟಿದ್ದು, ಸಂಬಂಧಪಟ್ಟ ಮಂತ್ರಿಗಳು ಬಂದ ನಂತರ ತೆಗೆದುಕೊಳ್ಳುತ್ತೇನೆ. ಈಗ ಸುಮ್ಮನೆ ಪ್ರಸ್ತಾಪ ಮಾಡಿದರೆ ಏನು ಪ್ರಯೋಜನ? ಆದ್ದರಿಂದ ಸೋಮವಾರ ಅಥವಾ ಮಂಗಳವಾರ ತೆಗೆದುಕೊಳ್ಳುತ್ತೇನೆ.

**ಪಂಚಾಯತ್ ಹಾಗು ತಾಲ್ಲೂಕು ಪಂಚಾಯತ್‌ಗೆ ಸಂಬಂಧಪಟ್ಟಂತೆ ಇಂಗ್ಲೀಷ್‌ನಲ್ಲಿ ಸುತ್ತೋಲೆಯನ್ನು ಹೊರಡಿಸುವುದರ ಬಗ್ಗೆ**

ಶ್ರೀ ಎಸ್. ಎಸ್. ಪಾಟೀಲ್ : ಶ್ವೇತಪತ್ರದ ಕನ್ನಡ ಪ್ರತಿಯನ್ನು ಇವತ್ತು ಕಳುಹಿಸಿ ಕೊಟ್ಟಿದ್ದಾರೆ. ಆದ್ದರಿಂದ ಮಾನ್ಯ ಅಧ್ಯಕ್ಷರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಆದರೆ, ಇವತ್ತು ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗೆ ಸಂಬಂಧಪಟ್ಟಂತೆ ಒಂದು ಸುತ್ತೋಲೆಯನ್ನು ಇಂಗ್ಲೀಷ್‌ನಲ್ಲಿ ಕಳುಹಿಸಿಕೊಟ್ಟಿದ್ದಾರೆ. ಆದ್ದರಿಂದ ಸರ್ಕಾರಕ್ಕೆ ನೀವು ಛೀಮಾರಿ ಮಾಡುವುದಿಲ್ಲವೆ? ಹಾಗೆ ಮಾಡದಿದ್ದರೆ ಈ ಸಭೆಯನ್ನು ಇಂಗ್ಲೀಷ್‌ನಲ್ಲಿಯೇ ನಡೆಸುತ್ತೇವೆಂದು ತೀರ್ಮಾನ ತೆಗೆದುಕೊಳ್ಳಿ, ಆಗ ಇಂಗ್ಲೀಷ್ ಬರದೇ ಇರುವವರೆಲ್ಲಾ ಹೊರಕ್ಕೆ ಹೋಗುತ್ತೇವೆ.

ಶ್ರೀ ಚಂದ್ರಕಾಂತ್ ಬೆಲ್ಲದ್ : ಆಡಳಿತ ಭಾಷೆ ಕನ್ನಡ ಎಂದು ಹೇಳಿ ಸರ್ಕಾರ ಹೀಗೇಕೆ ನಡೆದುಕೊಳ್ಳುತ್ತಿದೆ?

ಶ್ರೀ ಎಸ್. ಎಸ್. ಪಾಟೀಲ್ : ಕನ್ನಡಕ್ಕೆ ಪ್ರಥಮ ಪ್ರಾಶಸ್ತ್ಯವಿರುವುದರಿಂದ ಮೊದಲು ಕನ್ನಡದಲ್ಲಿ ಮಾಹಿತಿಗಳನ್ನು ಕಳುಹಿಸಿಕೊಡಿ. ಆದ್ದರಿಂದ ಮಾನ್ಯ ಅಧ್ಯಕ್ಷರು ಇದಕ್ಕೆಲ್ಲಾ ಅವಕಾಶ ಕೊಡಬಾರದು.

ಶ್ರೀ ಸಿ. ಚೆನ್ನಿಗಪ್ಪ : ಇಂಗ್ಲೀಷ್‌ನಲ್ಲಿ ಎಲ್ಲವನ್ನು ಕೊಡುವಾಗ ಕನ್ನಡಕ್ಕೆ ಯಾವಾಗ ಆದ್ಯತೆ ಕೊಡುತ್ತೀರಿ?

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು) : ಮಾನ್ಯ ಮುಖ್ಯಮಂತ್ರಿಗಳು ಹಣಕಾಸಿನ ಶ್ವೇತಪತ್ರವನ್ನು ತಮ್ಮ ಅನುಮೋದನೆ ಪಡೆದುಕೊಂಡು ಇಂಗ್ಲೀಷ್‌ನಲ್ಲಿ ಸಭೆಯ ಮುಂದೆ ಇಟ್ಟರು. ನಾವು ಆ ದಿವಸ ಅದರ ಕನ್ನಡ ಅನುವಾದವನ್ನು ಕೊಡುತ್ತೇವೆಂದು ಹೇಳಿ ಇವತ್ತಿನ ದಿವಸ ಕನ್ನಡ ಪ್ರತಿಯನ್ನು ಒದಗಿಸಿಕೊಟ್ಟಿದ್ದೇವೆ. ಇದಕ್ಕೆ ತಮಗೆ ಅಭಿನಂದನೆಯನ್ನು ಸಹ ಸಲ್ಲಿಸಿದ್ದಾರೆ. ಆದರೆ ನಮಗೆ ಅಭಿನಂದನೆಯನ್ನು ಸಲ್ಲಿಸಿಲ್ಲ.